ಅಧ್ಯಕ್ಷರು.—ರಾಜೂಗೌಡರೆ, ನಿಮ್ಮದು ಕೊಳ್ಳೆಗಾಲ ತಾಲ್ಲೂಕಿನ ಹನೂರಿನ ಕಿರಿಯ ಕಾಲೇಜಿ ಬಗ್ಗೆ ಕೇಳಿ.

ಶ್ರೀ ಜಿ. ರಾಜೂಗೌಡ.—ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇನೆ.

(ಶ್ರೀ ಬಿ. ಗಂಗಣ್ಣ ಅವರು ಗೈರು ಹಾಜರಾಗಿದ್ದಾರೆ)

2. ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿಷೇಧಿಸುವ ಬಗ್ಗೆ,

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಸದ್ಯದಲ್ಲಿ ರಾಜ್ಯ ಮಟ್ಟದಲ್ಲಿ ನಡೆಯಿತೆನ್ನಲಾದ ಚರ್ಚಾಕೂಟದಲ್ಲಿ ವೇಶ್ಯಾವಾಟಿಕೆಯನ್ನು ನಿಷೇಧಿಸುವುದನ್ನು ವಿರೋಧಿಸಿ ನಡೆದಿರುವ ಚರ್ಚೆಯು ಸಮಾಜದ ದುರ್ಬಲ ಹಾಗೂ ಬಡತನದಲ್ಲಿ ಬಳಲುತ್ತಿರುವ ಅವಿದ್ಯಾವಂತ ಹೆಣ್ಣುಮಕ್ಕಳ ಜೀವನವನ್ನು ಮತ್ತಷ್ಟು ಅನಾರೋಗ್ಯಕ್ಕೆ ಎಡೆ ಮಾಡಿಕೊಟ್ಟು ಸಾರ್ವಜನಿಕ ಜೀವನದ ಆರೋಗ್ಯವನ್ನು ಕೆಡಿಸತಕ್ಕಂತಹ ಕಾರ್ಯಕ್ರಮವಾಗಬಹುದು.

ಬುದ್ಧಿಜೀವಿಗಳು ನಡೆಸಿರುವ ಈ ಚರ್ಚೆಯ ವಿಶ್ವದ ಅತ್ಯಂತ ಪ್ರಾಚೀನ ಕಾಲದಿಂದ ಬಂದಿರುವ ಈ ಅನಿಷ್ಟ ಪದ್ಧತಿಯನ್ನು ಹಲವಾರು ಸಂಘಸಂಸ್ಥೆಗಳು ಹೊಡೆದೋಡಿಸುವ ಪ್ರಯತ್ನವನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ದೇವದಾಸಿ ಪದ್ಧತಿ ಹಾಗೂ ವೇಶ್ಯಾವಾಟಿಕೆಯ ನಿಷೇದಕ್ಕೆ ಬೆಂಬಲ ತೋರಿಸಿ ಚರ್ಚೆಯಲ್ಲಿ ಪಾಲ್ಗೊಂಡಿರುವ ಮಹನೀಯರು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಈ ವೃತ್ತಿಯಲ್ಲಿ ಶೇಕಡಾ ೭೦ ರಿಂದ ೮೦ ಜನರು ಕರ್ನಾಟಕ ಹಾಗೂ ಮಹಾರಾಷ್ಟ್ರ ದವರೇ ಇದ್ದಾರೆಂದು ಸವಿಸ್ತಾರವಾಗಿ ತಿಳಿಸಿದೆಯೆಂದು ವರದಿಯಾಗಿದೆ. ಸರಕಾರದ ನೀತಿಯನ್ನು ಹಾಗೂ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಕ್ಕಾಗಿ ಸರಕಾರದ ನಿರ್ದಿಷ್ಟ ಕಾರ್ಯಕ್ರಮ ಏನು ? ಈ ವೃತ್ತಿಗೆ ಬಲಿಯಾಗುವುದಕ್ಕೆ ಮುಖ್ಯ ಕಾರಣ ಸಮಾಜದಲ್ಲಿರುವ ಬಡತನ. ಈ ದಿಸೆಯಲ್ಲಿ ಬಡಜನರ ಜೀವನದಲ್ಲಿ ನೆಮ್ಮದಿ ತಂದಂ ಶಿಕ್ಷಣ ಕೊಟ್ಟು ಇಲ್ಲಿಯವರೆಗೆ ನಡೆದಿರುವ ಬಡ ಸಮಾಜದ ಹಿಂಸೆಗೆ ಪ್ರೇರಕವಾಗಿರುವ ಸಮಾಜಕ್ಕೆ ತಿಳುವಳಿಕೆ ನೀಡಿ ಒಂದು ವೇಳೆ ಈ ವೇಶ್ಯಾವಾಟಿಕೆ ಬೇಕಾದರೆ ಚರ್ಚೆಯಲ್ಲಿ ಪಾಲ್ಗೊಂಡಿರುವ ಮಹಾನುಭಾವರು ತಮ್ಮ ಮನೆತನದವರ ಯಾರನ್ನಾದರೂ ಈ ಕಾರ್ಯಕ್ಕೆ ಬಿಡಿಸಲು ಸಾಧ್ಯವೆ ಎಂಬ ವಿಷಯವನ್ನು ಕೂಡ ಪ್ರಸ್ತಾಪಿಸಬೇಕಾಗುತ್ತದೆ. ರಾಜ್ಯದಲ್ಲಿ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ತಡೆ ಹಿಡಿಯುವುದಕ್ಕಾಗಿ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ. ಆದಕಾರಣ ಈ ದಿಸೆಯಲ್ಲಿ ಸಂಪೂರ್ಣ ವಿವರವಾದ ಹೇಳಿಕೆ ನೀಡಬೇಕೆಂದು ಸಮಾಜ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಾರಿಗೌಡ ಪಾಟೀಲರು ಒಂದು ವಾಖ್ಯೆಯನ್ನು ಬರೆದಿದ್ದಾರೆ, ಉತ್ತರ ಅವರೇ ಕೊಟ್ಟಿದ್ದಾರೆ. ಅವರು ಹೇಳಿರುವುದನ್ನು ನಾನು ಹೇಳುತ್ತೇನೆ. ..ರಾಜ್ಯದಲ್ಲಿ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ತಡೆಹಿಡಿಯುವುದಕ್ಕಾಗಿ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ,, ಎಂದು. ಏನು ಹೇಳುತ್ತೀರಿ ಎಂದು ಕೇಳಿದ್ದಾರೆ. ಆದರೂ ಅವರಿಗೆ ಏನು ಮಾಡಿದ್ದೇವೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಿಮಗೆ ವಿಷಯ ಗೊತ್ತಿಲ್ಲ, ಗೊತ್ತಿಲ್ಲದೆ ಏಕೆ ಉತ್ತರ ಕೊಡುತ್ತೀರಿ.

ಅಧ್ಯಕ್ಷರು.—ಈ ವಿಷಯದಲ್ಲಿ ಮಧ್ಯೆ ಎದ್ದು ಮಾತನಾಡಬಾರದು ಎನ್ನುವುದೂ ನಿಮಗೆ ಗೊತ್ತಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ವೇಶ್ಯಾವಾಟಿಕೆ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದರ ಪಾಂಡಿತ್ಯದ ವಿಚಾರ ಮಾನ್ಯ ಮಲ್ಲಾರಿಗೌಡ ಪಾಟೀಲರಿಗೆ ಗೊತ್ತಿದ್ದರೆ ತುಂಬ ಸಂತೋಷ. ನಾವು ಏನು ಮಾಡಿದ್ದೇವೆ ಎನ್ನುವುದನ್ನು ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

೧. ಸರ್ಕಾರವು ದೇವದಾಸಿ (ಸಮರ್ಪಣಾ) ನಿಷೇಧ ಕಾಯ್ದೆ ೧೯೮೨ ಅನ್ನು ಜಾರಿಗೆ ತಂದಿದೆ.

೨. ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ವಿಶೇಷ ಘಟಕವನ್ನು ನಿರ್ದೇಶಕರ ಕಛೇರಿಯಲ್ಲಿ ತೆರೆಯಾಲಾಗಿದೆ, ಹಾಗೂ ಇದರ ಕಣ್ಣು ಘಟಕಗಳನ್ನು ಬೆಳಗಾವಿ ಮತ್ತು ಬೀದರ್‌ನಲ್ಲಿಯೂ ತೆರೆಯಲಾಗಿದೆ.

೩. ದೇವದಾಸಿಯರ ಮಕ್ಕಳಿಗಾಗಿ ಹೆಣ್ಣುಮಕ್ಕಳ ಪ್ರಾಮಾಣಿತ ಶಾಲೆಯನ್ನು ಸೌಂದತ್ತಿಯಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿ ಅವರಿಗೆ ಊಟ ಮತ್ತು ವಸತಿ ಸೌಕರ್ಯ ಕಲ್ಪಿಸಲಾಗಿದೆ. ಅಲ್ಲದೆ ಅಥಣಿಯಲ್ಲಿ ರಾಜ್ಯ ನಿಲಯವನ್ನು ಇವರಿಗಾಗಿ ಪ್ರಾರಂಭಿಸಲಾಗಿದೆ. ಇಲ್ಲಿ ದೇವದಾಸಿ ಮಹಿಳೆಯರಿಗೆ ವಸತಿ ಸೌಕರ್ಯದೊಂದಿಗೆ ಕೆಲವು ತರಬೇತಿಗಳನ್ನು ಕೊಟ್ಟು ತಮ್ಮ ಮುಂದಿನ ಜೀವನವನ್ನು ಸುಗಮಪಡಿಸಿಕೊಳ್ಳಲು ಸಹಕರಿಸಲಾಗಿದೆ.

೪. ದೇವದಾಸಿ ಮಹಿಳೆಯರು ತಮ್ಮ ಆರ್ಥಿಕ ಜೀವನವನ್ನು ಬಲಪಡಿಸಿಕೊಳ್ಳಲು ಇಲಾಖೆಯ ಮತ್ತು ಸರ್ಕಾರದ ಇತರ ಯೋಜನೆಗಳಾದ ಗೃಹಕಲ್ಯಾಣ ಐ.ಆರ್.ಡಿ.ಪಿ. ಇತ್ಯಾದಿಗಳಿಗಾಗಿ ಸಹಾಯಧನ ನೀಡಲಾಗುತ್ತಿದೆ.

೫. ದೇವದಾಸಿ ಮಹಿಳೆಯರಿಗಾಗಿ ೪ ತರಬೇತಿ ಕೇಂದ್ರಗಳನ್ನು ಮನೋಳಿ, ಚಟಕೋಳ, ಯಾದವಾಡ ಮತ್ತು ಕೌಜಲಗಿಗಳಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿ ೬೦ ದೇವದಾಸಿ ಮಹಿಳೆಯರಿಗೆ ಹೊಲಿಗೆ ಮೇಣದ ಬತ್ತಿ ತಯಾರಿಕೆ, ಅಗರಬತ್ತಿ ತಯಾರಿಕೆ ಮತ್ತು ಬಟ್ಟೆ ಸಾಬೂನು ತಯಾರಿಸುವ ತರಬೇತಿಯನ್ನು ಕೊಡಲಾಗುತ್ತಿದೆ.

೬. ಮನೋಳಿಯಲ್ಲಿ ವಿವಿದೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸಿ ನೊಂದಣಿ ಮಾಡಲಾಗಿದೆ.

೭. ದೇವದಾಸಿ ಮದುವೆಯನ್ನು ಉತ್ತೇಜಿಸುವ ಸಲುವಾಗಿ ದೇವದಾಸಿಯರನ್ನು ಮದುವೆಯಾದರೆ ಮದುವೆಯಾದ ದಂಪತಿಗಳಿಗೆ ೩೦೦೦-೦೦ ರೂ.ಗಳನ್ನು ಧನ ಸಹಾಯವನ್ನು ಕೊಡಲಾಗುತ್ತಿದೆ. ಈ ರೀತಿ ಇದುವರೆವಿಗೂ ೨೦೬ ದಂಪತಿಗಳಿಗೆ ಸಹಾಯಧನ ಕೊಡಲಾಗಿದೆ.

೮. ದೇವದಾಸಿಯ ಪಿಡುಗು ನಿರ್ಮೂಲನ ಮಾಡುವ ಜಿಲ್ಲಾ ಮಟ್ಟದ ಸಂಕೀರ್ಣಗಳನ್ನು ಬೀದರ್, ಗುಲ್ಬರ್ಗ, ಶಿವಮೊಗ್ಗ, ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ನಡೆಸಲಾಗಿದೆ.

೯. ಮಹಿಳಾ ಮತ್ತು ಸಾಮಾಜಿಕ ಕಾನೂನುಗಳನ್ನು ಈ ವಿಷಯದ ಬಗ್ಗೆ ವಿಭಾಗೀಯ ಮಟ್ಟದಲ್ಲಿ ಒಂದು ವಿಚಾರಗೋಷ್ಠಿಯನ್ನು ಹುಬ್ಬಳ್ಳಿಯಲ್ಲಿ ದಿನಾಂಕ ೨೮, ೨೯ನೇ ಡಿಸೆಂಬರ್ ೮೭ರಲ್ಲಿ ನಡೆಸಲಾಯಿತು.

೧೦. ಈ ಪದ್ಧತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಪ್ರಸಾರ ಮಾಧ್ಯಮಗಳಾದ ಕರಪತ್ರ, ಗೋಡೆಪತ್ರ, ಭಿತ್ತಿಪತ್ರ, ರೇಡಿಯೋ, ದೂರದರ್ಶನಗಳ ಮೂಲಕ ತಿಳಿಯಪಡಿಸಲಾಗುತ್ತಿದೆ.

೧೧. ಇಲಾಖೆಯು ದೇವದಾಸಿಯರ ಬಗ್ಗೆ ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸಿದೆ.

೧೨. ದೇವದಾಸಿಯರ ಪುನರ್ವಸತಿಗಾಗಿ ಬೆಳಗಾಂನಲ್ಲಿ ''ಮುಕ್ತಿ'' ಎಂಬ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ.